‘ನಮ್ಮೂರಲ್ಲಿ ಮಾತ್ರ ಮದ್ವೆ ಆಗಬಾರ್ದು ಕಣೆ. ಹೊಸ ಅಳಿಯಂದ್ರಿಗೆ ಮರ್ಯಾದೀನೆ ಕೊಡಲ್ಲ’ ಎಂದು ನನ್ನಾಕೆಯನ್ನು ಆಗಾಗ ರೇಗಿಸುತ್ತಲೇ ಇರ್ತೀನಿ. ‘ನಮ್ ಚನ್ನರಾಯಪಟ್ನ ಅಂದ್ರೆ ಚೆನ್ನದಂತ ಊರು’ ಎಂದು ಜಗಳದ ಚಂಡು ಹಿಡಿಯುವ ಆಕೆ ಮಾರಾಮಾರಿಗೇ ನಿಲ್ಲುತ್ತಾಳೆ. ಆಕೆಯ ಊರಿನ, ಅವರಪ್ಪನ ಮನೆಯ ಸಣ್ಣಪುಟ್ಟ ಪುಡಿ ಸಂಗತಿಗಳನ್ನೇ ಬೇಕಂತಲೇ ಗುಡ್ಡೆ ಹಾಕಿಕೊಂಡು ಅವಳ ಜೊತೆ ಕಾದಾಡುವುದು ನನಗೊಂದು ಥರದ ಶೋಕಿ. ನನ್ನ ಯಾವ ಬೆಣಚು ಮಾತಿಗೂ ಸೊಪ್ಪು ಹಾಕದ ಆಕೆ, ‘ನಮ್ಮೂರಿನ ಜನ ಚೆಂದ. ಅವರ ಭಾಷೆ ಸೊಗಡು ಅಂದ’ ಎಂದು ಶುರು ಮಾಡಿ, ‘ಇಲ್ಲಿನ ತರಕಾರಿಯಲ್ಲಿ ನಾಲಿಗೆ ನಲಿಸುವ ರುಚಿಯಿದೆ. ಇಂಥ ಕುರಿ ಮಾಂಸ ಪ್ರಪಂಚದಲ್ಲೇ ಇಲ್ಲ. ಓಹೋ! ಸೌತೆ ಕಾಯಿಯಂತೂ ಇಡೀ ಇಂಡಿಯಾದಲ್ಲೇ ಕಾಣಕ್ಕಾಗಲ್ಲ’ ಅಂತೆಲ್ಲಾ ಹಾಡಿ ಹೊಗಳಿ, ‘ಹೊಟ್ಟೆ ಉಬ್ಬುವಂತೆ ತಿಂದಿದ್ದು ಎಲ್ಲಾ ಮರೆತೇ ಬಿಟ್ರಾ’ ಎಂದು ಮುಲಾಜಿಲ್ಲದೆ ಚುಚ್ಚುತ್ತಾಳೆ. ಹೆಣ್ಣುಮಕ್ಕಳು ಸ್ವಭಾವತಃ ಅಂತಃಕರಣ ಜೀವಗಳು. ಏನಾದರೂ ಅವರ ಊರು ಮನೆಯ ಗೌರವಗಳನ್ನು ಸುಲಭಕ್ಕೆ ಬಿಟ್ಟುಕೊಡುವುದಿಲ್ಲ.

